ಸುಲಭ. ದೊರೈಯಂಥವರ ರಜನಿಕಾಂತನ ಸಿನಿಮಾ, ಒಂದು ದೇವಸ್ಥಾನದ ಆಸೆಗಳನ್ನು ಪೂರೈಸುವುದರಿಂದ ಸಮುದಾಯದ ಆಶೋತ್ತರಗಳನ್ನು ಈಡೇರಿಸಿದ್ದೇವೆ ಎನ್ನುವಂತೆ ಫೋಸ್ ಕೊಡಲು ಸಾಧ್ಯವಾದರೆ ಅದು ಅಧಿಕಾರಶಾಹಿಗೆ ಇಷ್ಟ. ಜೋಮೋ ಬಯಸುವುದನ್ನೆಲ್ಲ ಪೂರೈಸಿದರೆ ಅದು ಅವರ ಬುಡಕ್ಕೇ ಬರುತ್ತದೆ. ಕೂಲಿಂಗ್ ಗ್ಲಾಸ್ ಹಂಚುವುದು ಇದಕ್ಕೊಂದು ರೂಪಕದಂತಿದೆ.

ಜೋಮೋನಿಂದಲೇ ವಿವರಿಸಲ್ಪಡುವ, ಸ್ಥಳೀಯ ತಮಿಳರ ಬದುಕಿನ ಏರಿಳಿತಗಳಿಗೆ ಕಾರಣವಾಗುತ್ತಿರುವ ಮಲೇಷ್ಯಾದ ರಾಜಕೀಯ–ಧಾರ್ಮಿಕ–ಶೈಕ್ಷಣಿಕ ಮುಖಗಳು ಪೂರ್ತಿ ನಿಜವಲ್ಲ ಎನ್ನುವ ದೊರೈಗೆ ದೂರದೃಷ್ಟಿಯಾಗಲೀ, ತನಗೆ ನಿಜಕ್ಕೂ ಬೇಕಾಗಿರುವುದೇನು ಎಂಬ ಬಗ್ಗೆ ಸ್ಪಷ್ಟತೆಯಾಗಲಿ ಇಲ್ಲ. ಆದರೆ, ಅವನಿಗೂ ತಮಿಳರ ಮಕ್ಕಳಿಗೆ ಸರಿಯಾದ ಸವಲತ್ತುಗಳಿರುವ ಶಾಲೆಗಳಿಲ್ಲ, ಉದ್ಯೋಗ ಸಿಗುತ್ತಿಲ್ಲ, ಸಣ್ಣಪುಟ್ಟ ತಪ್ಪುಗಳಿಗೂ ಸೆರೆವಾಸ, ಸಾವು ಖಾತ್ರಿಯಾಗಿದೆ ಎನ್ನುವ ನೋವುಗಳೆಲ್ಲ ಇವೆ. ಸಾಮುದಾಯಿಕ ನೆಲೆಯ ನಿರೀಕ್ಷೆಗಳಂತೆ ಕಾಣುವ ಈ ಯಾವತ್ತೂ ಪ್ರಶ್ನೆಗಳು ದೊರೈಗೆ ವೈಯಕ್ತಿಕ ನೆಲೆಯ ಪ್ರಶ್ನೆಗಳಷ್ಟೇ. ಅವನಿಗೆ ನೆಮ್ಮದಿಯ ಬದುಕು ಸಿಕ್ಕಿದ ಕ್ಷಣದಲ್ಲೇ ಅವನ ಧ್ವನಿ ಬದಲಾಗುತ್ತದೆ. ಅವನ ಕೂಗು, ಒತ್ತಡಗಳೆಲ್ಲವೂ ನಾಟಕೀಯ ತಿರುವು ಪಡೆಯುತ್ತವೆ. ವೈಯಕ್ತಿಕ ಅಗತ್ಯಗಳಿಗೆ ಸಮುದಾಯಕ್ಕಾದ ಅನ್ಯಾಯವನ್ನು ಮುಂದಿಟ್ಟು ತನ್ನ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅವನು ಕಲಿಯುತ್ತಾನೆ. ಸಮುದಾಯ ಕೂಡ ಯಾರಿಗೋ ಸಿಗುವ ವೈಯಕ್ತಿಕ ಲಾಭದಿಂದ ತನಗಾದ ಒಳಿತೇನು ಎನ್ನುವುದನ್ನು ಪ್ರಶ್ನಿಸಿಕೊಳ್ಳದೆ ಕುರಿಮಂದೆಯಾಗುತ್ತದೆ! ಇಲ್ಲಿನ ತಮಿಳರಲ್ಲೇ ರಾಜಕಾರಣಿಗಳು, ಅಧಿಕಾರಸ್ಥರು, ಶ್ರೀಮಂತ ಉದ್ಯಮಿಗಳು ಇದ್ದಾರೆ. ದೊರೈ ತರಹದ ದಿನದ ಅನ್ನವನ್ನು ದಿನ ದಿನ ಸಂಪಾದಿಸಿಕೊಳ್ಳುವವರೂ ಇದ್ದಾರೆ. ಕಣ್ಣದಾಸ್, ರೇವತಿ ತರಹದವರೂ ಇದ್ದಾರೆ. ಮತ್ತು ಎಲ್ಲಿಗೂ ಸಲ್ಲದ ಜೋಮೋ ತರಹದವರೂ ಇದ್ದಾರೆ. ದೇವಸ್ಥಾನ, ಸಮುದಾಯದ ನಾಯಕನ ಪ್ರತಿಮೆ, ರಜನಿಕಾಂತನ ಕೂಲಿಂಗ್‌ಗ್ಲಾಸ್ ದೊರೈಯಂಥವರನ್ನು ಮರುಳುಮಾಡಬಲ್ಲ ಸಂಗತಿಗಳಾಗಿರುವುದರಿಂದಲೇ ಅಲ್ಲಿನ ತಮಿಳು ನಾಯಕರು, ಪ್ರಭಾವಿಗಳು, ಶ್ರೀಮಂತರು ತಮ್ಮವರ ಏಳಿಗೆಗಾಗಿ ಪ್ರಯತ್ನಿಸುವುದನ್ನು ಬಿಟ್ಟುಕೊಟ್ಟು ತಮ್ಮ ತಮ್ಮ ಬೇಳೆ ಬೇಯಿಸಿಕೊಂಡು ಹಾಯಾಗಿರುವುದು ಸಾಧ್ಯವಾಗಿದೆ. ಇದರೊಂದಿಗೆ ಕಾದಂಬರಿ ಒದಗಿಸುವ ಚೀನೀಯರ ಪರಿಪ್ರೇಕ್ಷ್ಯವನ್ನು ತಪ್ಪದೇ ಗಮನಿಸಬೇಕು.

ಇನ್ನೀಗ ಇದನ್ನು ನಮ್ಮದೇ ದೇಶಕ್ಕೆ ಅನ್ವಯಿಸದೇ ಇರುವುದು ಹೇಗೆ! ಇಲ್ಲಿಯೂ ನಡೆಯುತ್ತಿರುವುದು ಇದೇ ಅಲ್ಲವೆ?

ಇದೆಲ್ಲ ಇದ್ದೂ ನಾನು ಕಂಡಂತೆ ಈ ಕೃತಿಯ ಮುದ್ದೆಯಿರುವುದು ಮನುಷ್ಯನ ವಿಸ್ಮೃತಿಗೆ ಗುರಿಯಾಗಿರುವ ಮನುಕುಲದ ಹಾಡೇ. ಆದರೆ, ಅದೆಷ್ಟು ಸೂಕ್ಷ್ಮವಾಗಿದೆಯೆಂದರೆ, ಅದನ್ನು ಗುರುತಿಸಲಾರದಷ್ಟು ಆಧುನಿಕ ಮನುಷ್ಯ ಜಾಣನೂ ಆಗಿದ್ದಾನೆ, ವಿಸ್ಮೃತಿಗೂ ಒಳಗಾಗಿದ್ದಾನೆ ಅನಿಸುತ್ತದೆ. ಅವನು ನಾಚಿಕೆ ಪಡಬೇಕಾದ ಸಂಗತಿಗಳಿಗೆ ಹೆಮ್ಮೆ ಪಟ್ಟುಕೊಳ್ಳುತ್ತಿರುವುದನ್ನು ಕಾಣುತ್ತ ಈ ಮಾತನ್ನಾಡದೆ ವಿಧಿಯಿಲ್ಲ. ಹಾಗಾಗಿ 'ಚುಕ್ಕಿ ಬೆಳಕಿನ ಜಾಡು' ಅವನಿಗೆ ಕನ್ನಡಿಯಾಗುವುದೋ, ಕಿಟಕಿಯಾಗುವುದೋ ಎಂಬ ಬಗ್ಗೆ ಭರವಸೆ ಇಟ್ಟುಕೊಳ್ಳಲಾಗದಿದ್ದರೂ ಕರ್ಕಿ ಕೃಷ್ಣಮೂರ್ತಿಯವರ ಪ್ರಯತ್ನವಂತೂ ಮೆಚ್ಚುಗೆ ಮೂಡಿಸುತ್ತದೆ.